ಕೃವಿವಿ 37ನೇ ಘಟಿಕೋತ್ಸವ | ಸಚಿವ ಚಲುವರಾಯಸ್ವಾಮಿ ಸಲಹೆ

ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಒತ್ತು ನೀಡಿ

ಧಾರವಾಡ: ಹೊಸ ಹೊಸ ತಂತ್ರಜ್ಞಾನ ಬಳಸಿ, ಕೃಷಿ ಕ್ಷೇತ್ರದ ಅಭಿವೃದ್ಧಿಯ ಜತೆ ನಾಡಿನ ಸರ್ವಾಂಗೀಣ ಅಭಿವೃದ್ಧಿಗೂ ಕೈಜೋಡಿಸಲು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಕೃಷಿ ಪದವೀಧರರಿಗೆ ಸಲಹೆ ನೀಡಿದರು.

ಇಲ್ಲಿನ ಕೃಷಿ ವಿವಿ 37ನೇ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನಿಸಿದ ಅವರು, ಕೃಷಿ ಪದವೀಧರರು ಉದ್ಯೋಗ ಅರಸುವ ಬದಲು ಕೌಶಲ್ಯಾಧಾರಿತ ಕೃಷಿ ಮಾಡುವಂತೆ ಸಲಹೆ ನೀಡಿದರು. ಕೃಷಿ ಕ್ಷೇತ್ರದಲ್ಲಿ ಮೌಲ್ಯ ವರ್ಧನೆ, ಅಭಿವೃದ್ಧಿಗೆ ವಿಫುಲ ಅವಕಾಶವಿದೆ. ಕೃಷಿ ಕ್ಷೇತ್ರದ ವಿಕಾಸಕ್ಕೆ ಶ್ರಮಿಸಬೇಕು. ರೈತರಿಗೆ ಆತ್ಮವಿಶ್ವಾಸ ತುಂಬುವುದರ ಜತೆಗೆ ವೈಜ್ಞಾನಿಕ, ತಾಂತ್ರಿಕ ನೆರವು ಒದಗಿಸಲು ಕಿವಿಮಾತು ಹೇಳಿದರು. ನವದೆಹಲಿ ಕೃಷಿ ವಿಜ್ಞಾನಿಗಳ ನೇಮಕಾತಿ ಮಂಡಳಿ ಅಧ್ಯಕ್ಷ ಡಾ.ಸಂಜಯ ಕುಮಾರ, 2050ಕ್ಕೆ ಭಾರತ 1.7 ಬಿಲಿಯನ್ ಜನಸಂಖ್ಯೆ ಹೊಂದಲಿದ್ದು, ಶೇ.70ರಷ್ಟು ಆಹಾರ ಉತ್ಪನ್ನಗಳ ಬೇಡಿಕೆ ಹೆಚ್ಚಲಿದೆ ಎಂದರು.

ಘಟಿಕೋತ್ಸವಕ್ಕೆ ಚಾಲನೆ ನೀಡಿದ ರಾಜ್ಯಪಾಲ ಥಾವರ ಚಂದ ಗೆಹಲೋತ್ ಮಾತನಾಡಿ, ಹವಾಮಾನ ವೈಪರೀತ್ಯಗಳ ನಡುವೆ, ಕೃಷಿ ಕ್ಷೇತ್ರ ಶ್ರೀಮಂತಿಕೆ ಮಾಡುವಲ್ಲಿ ವಿಜ್ಞಾನಿಗಳ ಪಾತ್ರವೂ ಮಹತ್ವದ್ದಾಗಿದೆ ಎಂದರು. ಆಧುನಿಕ ಕಾಲದಲ್ಲಿ ಕೃಷಿ ಕ್ಷೇತ್ರ ಕ್ಷೀಣಿಸುತ್ತಿದೆ. ಇದು ಒಳ್ಳೆಯ ಬೆಳವಣಿಗೆ ಅಲ್ಲ. ಕೃಷಿ ಉತ್ಪಾದನೆ ಹೆಚ್ಚಿಸಬೇಕು. ನೈಸರ್ಗಿಕ ಹಾಗೂ ಸಾವಯವ ಕೃಷಿಗೆ ಒತ್ತು ನೀಡಬೇಕು ಎಂದು ಕೃಷಿ ಪದವೀಧರರಿಗೆ ಸಲಹೆ ನೀಡಿದರು. ಘಟಿಕೋತ್ಸವದಲ್ಲಿ 69-ಪಿಎಚ್.ಡಿ, 237-ಸ್ನಾತಕೋತ್ತರ, 627-ಸ್ನಾತಕ ಪದವಿ ಸೇರಿದಂತೆ 933 ಅಭ್ಯರ್ಥಿಗಳಿಗೆ ಪದವಿ ಪ್ರದಾನದ ಜತೆಗೆ 57 ಚಿನ್ನದ ಪದಕ, 99 ನಗದು ಬಹುಮಾನ ವಿತರಣೆ ಮಾಡಲಾಯಿತು.

ಶ್ರೀಯಾ ಚಿನ್ನದ ಹುಡಗಿ!

ಸ್ನಾತಕ ಬಿಎಸ್ಸಿ ಪದವಿಯಲ್ಲಿ 9.209 ಸಿಜಿಪಿ ಗಳಿಸಿದ ಶ್ರೀಯಾ ಕರಿ ಚಿನ್ನದ ಹುಡುಗಿಯಾಗಿ ಹೊರಹೊಮ್ಮಿದಳು. ಇವಳಿಗೆ ಸೀತಾರಾಂ ಜಿಂದಾಲ್ ಪ್ರತಿಷ್ಠಾನ, ಕೃವಿವಿ ಮೊದಲ ಕುಲಪತಿ ಡಾ.ಜೆ.ವಿ.ಗೌಡ, ಕೃವಿವಿಯ ಅಭಿನಂದನಾ ಸಮಿತಿ ಚಿನ್ನದ ಪದಕ ಪ್ರದಾನಿಸಿತು.

Hosadigantha Pg.03

ಎಡೆಕುಂಟೆ ಹೊಡೆದ ಕೃಷಿ ಸಚಿವ

ಧಾರವಾಡ: ಧಾರವಾಡ ತಾಲೂಕಿನ ಹೆಬ್ಬಳ್ಳಿ ಗ್ರಾಮ ವ್ಯಾಪ್ತಿಯ ಹೊಲಗಳಲ್ಲಿನ ಬೆಳೆ ಪರಿಶೀಲಿಸಿದ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ರೈತರ ಜತೆ ಸೇರಿ ಬೆಳೆಗಳಲ್ಲಿ ಎಡೆಕುಂಟೆ ಹೊಡೆದು ಗಮನ ಸೆಳೆದರು.

ಹೆಬ್ಬಳ್ಳಿಯ ಯಲ್ಲಪ್ಪ ಈಶ್ವರಪ್ಪ ಸಾಲಿ ಅವರ ಜಮೀನಿನಲ್ಲಿ ಸಮಗ್ರ ಕೃಷಿ ಪದ್ಧತಿ ತಾಕು ವೀಕ್ಷಣೆ ಹಾಗೂ ಬಹುಬೆಳೆ ಕಟಾವು ಯಂತ್ರ ವಿತರಣೆ ಮಾಡಿದರು. ಬಳಿಕ ಕೈ ಎಡೆಕುಂಟೆ ಹಾಗೂ ಎತ್ತುಗಳ ಮೂಲಕ ಎಡೆಕುಂಟೆ ಹೊಡೆದು ಕೃಷಿಯಲ್ಲಿ ಆಧುನಿಕತೆಯನ್ನು ಅಳವಡಿಸಿಕೊಳ್ಳುವಂತೆ ರೈತರಿಗೆ ಸಲಹೆ ನೀಡಿದರು.

VijayaKarnataka Pg.03

▪ ಧಾರವಾಡ ಕೃಷಿ ವಿವಿ ಘಟಿಕೋತ್ಸವದಲ್ಲಿ ಡಾ. ಸಂಜಯಕುಮಾರ ಸಲಹೆ ▪

ಕೃಷಿ ಉತ್ಪನ್ನಗಳ ಬೇಡಿಕೆ ಹೆಚ್ಚಳ: ಸುಧಾರಣೆ ಅಗತ್ಯ

ಧಾರವಾಡ: ದೇಶದಲ್ಲಿ 2050ಕ್ಕೆ ಜನಸಂಖ್ಯೆ 1.7 ಬಿಲಿಯನ್‌ಗೆ ತಲುಪಲಿದ್ದು, ಸದ್ಯದ ಬೇಡಿಕೆಯ ಶೇ. 70 ರಷ್ಟು ಕೃಷಿ ಉತ್ಪನ್ನಗಳ ಬೇಡಿಕೆ ಹೆಚ್ಚಲಿದೆ. ಇದನ್ನು ಎದುರಿಸಲು ಕೃಷಿ ಕ್ಷೇತ್ರದಲ್ಲಿ ಹಲವಾರು ಬದಲಾವಣೆ ತರುವ ಅಗತ್ಯವಿದೆ ಎಂದು ನವದೆಹಲಿ ಕೃಷಿ ವಿಜ್ಞಾನಿಗಳ ನೇಮಕಾತಿ ಮಂಡಳಿ ಅಧ್ಯಕ್ಷ ಡಾ. ಸಂಜಯ ಕುಮಾರ ಹೇಳಿದರು.

ಕೃಷಿ ವಿಶ್ವವಿದ್ಯಾಲಯದ ರೈತ ಜ್ಞಾನಾಭಿವೃದ್ಧಿ ಕೇಂದ್ರದ ಸಭಾಭವನದಲ್ಲಿ ಗುರುವಾರ ನಡೆದ 37ನೇ ಘಟಿಕೋತ್ಸವದಲ್ಲಿ ಅತಿಥಿಗಳಾಗಿ ಮಾತನಾಡಿ, ದೇಶದ ಖಾದ್ಯ ತೈಲ ಉತ್ಪಾದನೆಯ ಶೇ. 40 ರಷ್ಟು ವಾರ್ಷಿಕ ಬೇಡಿಕೆ ಪೂರೈಸಲಿದ್ದು, ಶೇ. 60 ರಷ್ಟು ಇಂದಿಗೂ ಆಮದು ಮಾಡಿಕೊಳ್ಳಲಾಗುತ್ತಿದೆ. ಆಮದು ಬಿಟ್ಟು ನಾವೇ ತಂತ್ರಜ್ಞಾನ ಬಳಕೆ ಮಾಡಿ ಬೆಳೆಯಬೇಕಾದ ಅನಿವಾರ್ಯತೆ ಇದೆ ಎಂದರು. ಕೃಷಿ ಕ್ಷೇತ್ರದಲ್ಲಿ ಅಕ್ಕಿ ಮತ್ತು ಗೋಧಿ ಬೆಳೆಯ ಪ್ರಮುಖ ಉತ್ಪಾದಕನಾಗಿ ಸ್ವಾವಲಂಬನೆ ಸಾಧಿಸಿ ಗಮನಾರ್ಹ ಪ್ರಗತಿ ಸಾಧಿಸಿದರೂ, ಪ್ರಮುಖ ಸಮಸ್ಯೆಗಳು ಇನ್ನೂ ಕೃಷಿ ಕ್ಷೇತ್ರವನ್ನು ಕಾಡುತ್ತಿವೆ. ಇವುಗಳ ಪರಿಹಾರಕ್ಕಾಗಿ ವಿಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನದ ಹೆಚ್ಚಿನ ಬಳಕೆ ಅಗತ್ಯವಾಗಿದೆ. ಕೃಷಿ ವಿಜ್ಞಾನಿಗಳು ಇವುಗಳತ್ತ ಗಮನ ಹರಿಸಬೇಕಿದೆ ಎಂದರು. ಭಾರತ ಕೆಲವು ಮಸಾಲೆ ಪದಾರ್ಥಗಳ, ಔಷಧೀಯ ಸಸ್ಯಗಳ, ಪ್ರಮುಖ ತೈಲಗಳ ಮತ್ತು ಅಲಂಕಾರಿಕ ಪುಷ್ಪಗಳ ಕೊರತೆ ಅನುಭವಿಸುತ್ತಿದ್ದು ಅವುಗಳನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳುತ್ತಿದೆ. ಈ ಎಲ್ಲ ಸಮಸ್ಯೆಗಳ ಪರಿಹಾರಕ್ಕಾಗಿ ಬಹುಪ್ರಕಾರಗಳ ಉಪಾಯ ಅಗತ್ಯವಿದೆ. ಸದ್ಯ ಆಮದು ಮಾಡಿಕೊಳ್ಳುತ್ತಿರುವ ಕೃಷಿ ಪದಾರ್ಥಗಳ ಉತ್ಪನ್ನವನ್ನು ದೇಶದಲ್ಲಿಯೇ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು. ಇದಕ್ಕಾಗಿ ಸಂಶೋಧನೆ ಮತ್ತು ಅಭಿವೃದ್ಧಿ ಕೆಲಸ ತೀವ್ರವಾಗಬೇಕು. ತಂತ್ರಜ್ಞಾನದ ಹೊರತಾಗಿಯೂ ಕೆಲವು ಕ್ರಮಗಳನ್ನು ಜಾರಿಗೊಳಿಸವುದು ಅಗತ್ಯ ಎಂದರು.

ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಮಾತನಾಡಿ, ನಶಿಸಿ ಹೋಗುತ್ತಿರುವ ಸ್ಥಳೀಯ ಬೆಳೆಗಳ ತಳಿಗಳ ಸಂಗ್ರಹಣೆಗೆ ಸಮುದಾಯ ಬೀಜ ಬ್ಯಾಂಕ್‌ನ್ನು ಸ್ಥಾಪಿಸಲಾಗುತ್ತಿದೆ. ಜೊತೆಗೆ ಕೃಷಿಯಲ್ಲಿ ಹೊಸತನವನ್ನು ತರಲು ಕೃಷಿ ನವೋದ್ಯಮಗಳಿಗೆ ಪ್ರೋತ್ಸಾಹ ನೀಡಲಾಗುವುದು ಎಂದರು. ರಾಜ್ಯಪಾಲ ಥಾವರಚಂದ ಗೆಹ್ಲೋಟ್ ಮಾತನಾಡಿದರು. ಕುಲಪತಿ ಡಾ. ಪಿ.ಎಲ್. ಪಾಟೀಲ ಉಪಸ್ಥಿತರಿದ್ದರು. ನಂತರ ಪದವಿ ಪ್ರದಾನ ಮಾಡಲಾಯಿತು.

ಧಾರವಾಡ ಕೃಷಿ ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ಅತಿ ಹೆಚ್ಚು ಚಿನ್ನದ ಪದಕಗಳಿಸಿದ ವಿದ್ಯಾರ್ಥಿನಿ ಶ್ರಿಯಾ ಕರಿ ಅವರಿಗೆ ಕೃಷಿ ಸಚಿವ ಚಲುವರಾಯಸ್ವಾಮಿ ಅವರು ಚಿನ್ನದ ಪದಕ ಪ್ರದಾನ ಮಾಡಿದ ಸಂದರ್ಭ.

3 ಚಿನ್ನದ ಪದಕ ಪಡೆದ ಸಾಧಕಿ

ಕೃಷಿ ಕ್ಷೇತ್ರದ ಸಂಶೋಧನೆಯಲ್ಲಿ ಆಸಕ್ತಿಯಿದ್ದು, ಕಷ್ಟಪಟ್ಟು ಹಾಕಿದ ಶ್ರಮಕ್ಕೆ ತಕ್ಕ ಪ್ರತಿಫಲವೇ ಸಿಕ್ಕಿದೆ. ನಿರೀಕ್ಷೆಯಂತೆ ಚಿನ್ನದ ಪದಕ ಪಡೆದಿದ್ದು, ಖುಷಿ ಕೊಟ್ಟಿದೆ. ಸಂಶೋಧನೆ ಕ್ಷೇತ್ರದಲ್ಲಿಯೇ ಸಾಧನೆ ಮಾಡುವ ಆಶಯವಿದ್ದು, ಹೀಗಾಗಿ ಕೃಷಿ ವಿಜ್ಞಾನಿಯಾಗುವ ಇಚ್ಛೆಯಿದೆ. ಈ ಮೂಲಕ ರೈತ ಸಮುದಾಯ ಹಾಗೂ ಕೃಷಿ ಕ್ಷೇತ್ರಕ್ಕೆ ಕೊಡುಗೆ ನೀಡುವ ಕನಸು ಇದೆ.